“ಮಗಳೆ, ದೇವರಲ್ಲಿ ನಂಬಿಕೆ ಇಡು. ನಿನ್ನ ಹೃದಯವನ್ನು ತೆರೆದುಕೋ. ಅಂದರೆ ನೀನು ದೇವರಿಂದ ಕ್ಷಮೆ ಹೊಂದುವಿ” ಫಾದರ್ ಅವರ ಪ್ರೇರಣಾತ್ಮಕ ಮಾತುಗಳಿಂದ ಇರ್ನೆಗೆ ಹೊಸ ಧೈರ್ಯ ಬಂದಂತಾಯ್ತು. ಮತ್ತೆ ಹೇಳತೊಡಗಿದಳು–

“ಫಾದರ್, ನಿನ್ನೆ ನಾವು ಶಾಲೆಯ ವತಿಯಿಂದ ವನಭೋಜನಕ್ಕೆ ಹೋಗಿದ್ದೆವು. ನನ್ನ ಗೆಳತಿ ಶರ್ಮಿಳಾ ನನ್ನೊಂದಿಗಿದ್ದಳು. ಊಟ ಮಾಡಲೆಂದು ನಾವಿಬ್ಬರೂ ಒಟ್ಟಿಗೆ ಕುಳಿತೆವು. ನಾನು ಒಯ್ದಿದ್ದ ಗೋಮಾಂಸದ ಬರ್ಗರನ್ನು ಅವಳಿಗೆ ಕೊಟ್ಟೆ. ಅವಳು ಅದನ್ನು ತಿಂದಳು. ಹಿಂದೂಗಳು ಗೋಮಾಂಸ ತಿನ್ನುವುದಿಲ್ಲವೆಂದು ನನಗೆ ಗೊತ್ತಿರಲಿಲ್ಲ. ಅದಕ್ಕಾಗಿ ನಾನು ತಪ್ಪು ಮಾಡಿಬಿಟ್ಟೆ. ಫಾದರ್ ನನ್ನನ್ನು ಕ್ಷಮಿಸಿರಿ.”

ಫಾದರ್ ಮುಖದ ಮೇಲೆ ನಗುವಿನ ಅಲೆಯೊಂದು ಸುಳಿದಾಡಿತು.

“ಅಷ್ಟೇ ತಾನೆ, ಮಗಳೆ ನೀನೇನೂ ಚಿಂತಿಸಬೇಡ. ಇದು ಕ್ಷಮಾರ್ಹವಾದ ಸಣ್ಣ ಅಪರಾಧ. ಇದಕ್ಕಾಗಿ ನೀನು ಕ್ಷಮೆ ಕೇಳುತ್ತಿರುವಿಯಲ್ಲವೆ? ನಿನ್ನ ಹೃದಯ ಈಗ ಪರಿಶುದ್ಧವಾಯಿತು.”

“ಆದರೆ, ಫಾದರ್, ಇದು ನನ್ನಿಂದಾಗಿ ಅವಳಿಗೆ ತಟ್ಟಿದ ಪಾಪ!!”

ಇರ್ನೆಯ ಮಾತನ್ನು ನಡುವೆಯೇ ತಡೆದ ಫಾದರ್ ಅವಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಹೇಳಿದರು.

“ಮಗೂ, ನೀನೇನೂ ಚಿಂತೆ ಮಾಡಬೇಡ. ಎಲ್ಲ ಸಮಸ್ಯೆಯನ್ನೂ ಪರಿಹರಿಸಲಾಗುವುದು” ಎನ್ನುತ್ತ ದೇವರಲ್ಲಿ ಪ್ರಾರ್ಥಿಸಿದ ಅವರು, “ದೇವರು ನಿನ್ನನ್ನು ಕ್ಷಮಿಸಿದ್ದಾರೆ. ನೀನೀಗ ದೇವರ ಕೃಪೆಗೆ ಪಾತ್ರಳಾಗಿದ್ದೀ. ಶಾಂತಳಾಗು” ಎಂದು ಕೊನೆಯ ಆಶೀರ್ವಾದ ಮಾಡಿ ಎದ್ದು ನಿಂತರು.

‘ಅದು ಹೇಗೆ? ದೇವರು ತನ್ನನ್ನೇನೋ ಕ್ಷಮಿಸಿರಬಹುದು. ಆದರೆ ಶರ್ಮಿಳಾಳ ತಂದೆತಾಯಿ ಅವಳನ್ನು ಕ್ಷಮಿಸುತ್ತಾರೆಯೆ? ಅಥವಾ ದೇವರು ಅವಳನ್ನು ಕ್ಷಮಿಸುತ್ತಾನೆಯೆ?’ ಹೀಗೆ ಮತ್ತೆ ಯೋಚನೆಗಳ ತಾಕಲಾಟದ ಮನೋಸ್ಥಿತಿಯಲ್ಲಿಯೇ ಇರ್ನೆ ಮನೆಯ ಕಡೆ ಹೊರಟಳು. ರಾತ್ರಿಯಾಯಿತು... ಮತ್ತೆ ಅದೇ... ಮರಳಿ ಬಂತು ಕನಸು.

ಈ ಸಲದ ಕನಸಿನಲ್ಲಿ ಇರ್ನೆ, ಶರ್ಮಿಳಾಳ ಎದುರು ಮಂಡಿಯೂರಿ ಕುಳಿತು ಕ್ಷಮೆ ಬೇಡುತ್ತಿದ್ದಾಳೆ. ಶರ್ಮಿಳಾ ಮಾತ್ರ ಅವಳತ್ತ ಗಮನ ಕೊಡದೆ ತಿರಸ್ಕಾರದ ಮಾತುಗಳನ್ನಾಡುತ್ತಿದ್ದಾಳೆ. ‘ತಪ್ಪು ಮಾಡಿದ್ದು ನೀನು, ಅದಕ್ಕಾಗಿ ನಾನು ದಂಡ ತೆರಬೇಕೆ? ನೋಡಿಲ್ಲಿ ಹೇಗಿವೆ...’ ಎನ್ನುತ್ತ ತನ್ನ ಬೆನ್ನು ಮತ್ತು ಕೈಕಾಲುಗಳ ಮೇಲೆ ಮೂಡಿದ್ದ ಹೊಡೆತದ ಬಾರುಗಳನ್ನು ತೋರಿಸುತ್ತಾಳೆ. ‘ಅಯ್ಯೋ ಶರ್ಮಿಳಾ, ನನ್ನಿಂದ ತಪ್ಪಾಯ್ತು. ನೀನು ನಿಷ್ಪಾಪಿ ಹುಡುಗಿ. ಯಾರು ನಿನ್ನನ್ನು ಹೊಡೆದದ್ದು? ನಿಜವಾಗಿ ನೋಡಿದರೆ ಈ ಹೊಡೆತ ನನಗೆ ಬೀಳಬೇಕು...’ ನೊಂದುಕೊಂಡ ಇರ್ನೆ ಹೀಗೆನ್ನುತ್ತಿರುವಾಗಲೆ ದೊಡ್ಡ ದನಿಯೊಂದು ಕೇಳಿಬರುತ್ತದೆ. ‘...ಹಾಂ... ನಿನಗೂ ಕಾದಿದೆ... ನೀನೇನೂ ಹೊಡೆತಗಳಿಂದ ತಪ್ಪಿಸಿಕೊಳ್ಳುವೆನೆಂದು ಭಾವಿಸಬೇಡ...’ ಹೀಗೆ ಚೀರುತ್ತ ಧಡೂತಿ ಆಸಾಮಿಯೊಂದು ತನ್ನ ಕೆಂಗಣ್ಣುಗಳನ್ನು ತಿರುಗಿಸುತ್ತ, ಇರ್ನೆಯನ್ನು ದುರುಗುಟ್ಟಿ ನೋಡುತ್ತ ಅವಳ ಎದುರಿಗೇ ಬಂದು ನಿಂತಿದೆ. ಬಹುಶಃ ಅವರು ಶರ್ಮಿಳಾಳ ತಂದೆಯೇ ಇರಬೇಕು. “ಶರ್ಮಿಳಾಳನ್ನು ಅಪವಿತ್ರಗೊಳಿಸಿದ್ದು ನೀನೆ ತಾನೆ?... ಹೌದೋ ಅಲ್ಲವೋ?...”

“ಇಲ್ಲ... ಇಲ್ಲ... ಇಲ್ಲ...”

“ಇಲ್ಲ ಅನ್ನುತ್ತೀಯಾ?... ನೀನೇ ಮಾಡಿದ್ದಲ್ಲವೇ ಆ ಕೆಲಸವನ್ನು?... ಹೌದು ನೀನೇ